**ಸಾಕ್ಷಿಯನ್ನು ದಿಃ 16.10.2023 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎನ್ ಬಿ ಆರ್ ವಕೀಲರಿಂದಃ**

ಈ ದಿನ ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಪ್ರಥಮ ವರ್ತಮಾನ ವರದಿಯ ಯಥಾ ನಕಲನ್ನು ನಿಪಿ. 1 ಎಂದು, ದೂರಿನ ಯಥಾ ನಕಲನ್ನು ನಿಪಿ. 2 ಎಂದು, ಸ್ಥಳ ಪಂಚನಾಮೆಯ ಯಥಾ ನಕಲನ್ನು ನಿಪಿ. 3 ಎಂದು, ಕಚ್ಚಾ ನಕ್ಷೆಯ ಯಥಾ ನಕಲನ್ನು ನಿಪಿ. 4 ಎಂದು, ಅಮಾನತ್ತು ಮಹಜರಿನ ಯಥಾ ನಕಲನ್ನು ನಿಪಿ. 5 ಎಂದು, ಎಂವಿಐ ವರದಿಯ ಯಥಾ ನಕಲನ್ನು ನಿಪಿ. 6 ಎಂದು, ಗಾಯದ ಪ್ರಮಾಣ ಪತ್ರದ ಯಥಾ ನಕಲನ್ನು ನಿಪಿ. 7 ಎಂದು, ಅಂತಿಮ ದೋಷಾರೋಪಣಾ ಪಟ್ಟಿಯ ಯಥಾ ನಕಲನ್ನು ನಿಪಿ. 8 ಎಂದು, ಒಂದು ಬಿಡುಗಡೆ ಸಾರಾಂಶವನ್ನು ನಿಪಿ. 9 ಎಂದು, ಕ್ರಮ ಸಂಖ್ಯೆ 1 ರಿಂದ 15 ವರೆಗಿನ ರೂ.1,27,695/- ಮೊತ್ತದ ಮೆಡಿಕಲ್ ಬಿಲ್ ಗಳನ್ನು ಒಟ್ಟಾಗಿ ನಿಪಿ. 10 ಎಂದು, ಕ್ರಮ ಸಂಖ್ಯೆ 1 ರಿಂದ 9 ವರೆಗಿನ ಸಲಹಾ ಚೀಟಿಗಳನ್ನು ಒಟ್ಟಾಗಿ ನಿಪಿ. 11 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದು, ನೀಡಲಾಯಿತು)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಪ್ರಧಾನ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.